॥ ಶ್ರೀ ಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ॥

॥ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ಗುರುಭ್ಯೋ ನಮಃ॥

॥ ಶ್ರೀವಾದಿರಾಜ ಗುರುಭ್ಯೋ ನಮಃ॥

ವ್ಯಾಸಾಯ ಭವನಾಶಾಯ ಶ್ರೀಶಾಯ ಗುಣರಾಶಯೇ।
ಹೃದ್ಯಾಯ ಶುದ್ಧವಿದ್ಯಾಯ ಮಧ್ವಾಯ ಚ ನಮೋ ನಮಃ॥
ಕಾಮಧೇನುರ್ಯಥಾ ಪೂರ್ವಂ ಸರ್ವಾಭೀಷ್ಟಫಲಪ್ರದಾ।
ತಥಾ ಕಲೌ ವಾದಿರಾಜಶ್ರೀಪಾದೋಽಭೀಷ್ಟದಃ ಸತಾಮ್ ॥
ಭೂಮಂಡಲಸ್ಥಸದ್ವೈಷ್ಣವೇಭ್ಯೋ ನಮಃ।

# ಶ್ರೀ ಪಾಜಕ ಕ್ಷೇತ್ರ ಮಹಿಮೆ

-ಲೇಖಕ ಶ್ರೀಗೋಪಾಲಾಚಾರ್ಯರು

''ಪವಿತ್ರಂ ಪಾಜಕ ಕ್ಷೇತ್ರಂ ಕೋನ ಸೇವೇತ ಕೋವಿದಃ।
ಸತ್ಯಲೋಕೇಶ್ವರಃ ಪ್ರಾಣೋ ಯತ್ರಾವಾತರದುತ್ಸುಕಃ ॥''

-(ತೀರ್ಥ ಪ್ರಬಂಧಃ )

'ಸತ್ಯಲೋಕಕ್ಕೆ ಅಧೀಶ್ವರರಾದ ವಾಯುದೇವರು ''**ಮಧ್ವ**'' ರಾಗಿ ಪಾಜಕ ಕ್ಷೇತ್ರದಲ್ಲಿ ಅವತರಿಸಿದ್ದಾರೆ. ಆದ್ದರಿಂದ ಈ ಕ್ಷೇತ್ರವನ್ನು ಯಾವ ಕೋವಿದನೂ ಸೇವಿಸದೇ ಇರಲಾರ' ಎಂದು ಮಹಾನುಭಾವರಾದ ಶ್ರೀವಾದಿರಾಜ ಸ್ವಾಮಿಗಳು ಕೊಂಡಾಡಿದ್ದಾರೆ.

ಸ್ಕಂದ ಪುರಾಣದಲ್ಲಿ ಇದರ ವರ್ಣನೆ ಇದೆ. ನಾರಾಯಣ ಪಂಡಿತಾಚಾರ್ಯರು ಶ್ರೀ ಸುಮಧ್ವವಿಜಯದಲ್ಲಿ, ಶ್ರೀ ಹೃಷಿಕೇಶತೀರ್ಥರು ಸಂಪ್ರದಾಯ ಪದ್ಧತಿಯಲ್ಲಿ, ಶ್ರೀವಾದಿರಾಜ ಸ್ವಾಮಿಗಳು ತೀರ್ಥಪ್ರಬಂಧದಲ್ಲಿ ವರ್ಣಿಸಿದ್ದಾರೆ. ಉಡುಪಿ ಕ್ಷೇತ್ರದಿಂದ ಸುಮಾರು ೧೬ ಕಿ.ಮೀ.ದೂರದಲ್ಲಿದೆ.ಈ ಕ್ಷೇತ್ರವು ಅತ್ಯಂತ ಸುಂದರವಾಗಿದೆ. ಪ್ರಕೃತಿ ಅಭಿಮಾನಿನಿಯಾದ



ದುರ್ಗಾದೇವಿಯು ಇಲ್ಲಿ ನೆಲೆಸಿದ್ದಾಳೆ. ಈ ಕ್ಷೇತ್ರವು ಮೂರು ಲೋಕದ ಗುರುಗಳಾದ ''ಶ್ರೀ ಮಧ್ವಾಚಾರ್ಯ''ರ ಅವತಾರ ಹಾಗೂ ಬಾಲ್ಯದ ಲೀಲೆಗಳಿಂದ ಲೋಕವಿಖ್ಯಾತವಾಗಿದೆ. ಶ್ರೀ ಪರಶುರಾಮದೇವರು ಕನ್ಯಾಕುಮಾರಿಯಿಂದ ಗೋಕರ್ಣದ ಒರೆಗೆ ಪಶ್ಚಿಮ ಸಮುದ್ರವನ್ನು ತನ್ನ ಬಾಣ ಬೀಳುವವರೆಗೆ ಹಿಂದೆ ಸರಿಸಿದನು. ಆದ್ದರಿಂದ ಈ ಹೊಸ ಭೂಭಾಗಕ್ಕೆ ಶ್ರೀಪರಶುರಾಮಕ್ಷೇತ್ರವೆಂದು ಹೆಸರು. ಈ ಪರಶುರಾಮಕ್ಷೇತ್ರದಲ್ಲಿ ಮೋಕ್ಷದಾಯಕವಾದ ಏಳು ಕ್ಷೇತ್ರಗಳಿವೆ.

ರೌಪ್ಯ ಪೀಠಕುಮಾರಾದ್ರಿಃ ಕುಂಭಾಸೀಚಧ್ವಜೇಶ್ವರಃ
ಕ್ರೋಡ,ಗೋಕರ್ಣ, ಮೂಕಾಂಭಾಃ ಸಪ್ತೈತಾಃ ಮೋಕ್ಷದಾಯಕಾಃ ॥

ಇವುಗಳಲ್ಲಿ ರಜತ ಪೀಠಪುರವೆಂದು ಪ್ರಸಿದ್ಧವಾದ ಉಡುಪಿಗೆ ಅಗ್ರಸ್ಥಾನ. ಇದರ ಸಮೀಪದಲ್ಲೇ ಪವಿತ್ರವಾದ ಪಾಜಕ ಕ್ಷೇತ್ರವಿದೆ.

''ರಾಮಾಧಿವೇಶಿತ ಹರಿಸ್ವಸೃಮೌಲಿಮಾಲಾರಾಜದ್ವಿಮಾನಗಿರಿ-
ಶೋಭಿತಮಧ್ಯುವಾಸ ।
ಕ್ಷೇತ್ರಂ ಸ ಪಾಜಕಪದಂ ತ್ರಿಕುಲೈಕಕೇತುಃ ಕಂ ಯದ್ದಧಾತಿ ಸತತಂ
ಖಲು ವಿಶ್ವಂ ಪಾಜಾತ್ ''

(ಶ್ರೀ ಸುಮಧ್ವವಿಜಯ)

''ವಿಶ್ವ ಪಾಲಕನಾದ, ಹುಟ್ಟು ಸಾವು ರಹಿತನಾದ ಭಗವಂತನಾದ ಆ ಪರಶುರಾಮನಿಂದ ನೀರು ಪಡೆದಿರುವುದರಿಂದ ಇದು''ಪಾಜಕ''ವೆನಿಸಿತು. ಶ್ರೀ ಪರಶುರಾಮದೇವರು ಇಲ್ಲೇ ನೆಲೆಸಿದ್ದಾರೆ.

ಈ ಪಾಜಕದಲ್ಲಿ ಪರಶುರಾಮದೇವರು ನಾಲ್ಕು ತೀರ್ಥಗಳನ್ನು ನಿರ್ಮಿಸಿದ್ದಾರೆ. ಈ ತೀರ್ಥಗಳಲ್ಲಿ ಸ್ನಾನಮಾಡುವವರಿಗೆ ನಾಲ್ಕು ಪಾದಗಳಿಂದ ಧರ್ಮವು ವೃದ್ಧಿಯಾಗುವುದು ಎಂಬ ತತ್ವವನ್ನು ಸಜ್ಜನರಿಗೆ ತಿಳಿಸಲು ಈ ತೀರ್ಥಗಳನ್ನು ನಿರ್ಮಿಸಿದ್ದಾರೆ.

'' ತಪಃ ಶೌಚಂ ದಯಾ ಸತ್ಯಂ ಇತಿಪಾದಾಃ ಕೃತೇಕೃತಾಃ''

(ಶ್ರೀ ಭಾಗವತ-೧-೧೭-೨೪)

ಎಂದು ಭಾಗವತವು ಧರ್ಮದ ನಾಲ್ಕು ಪಾದಗಳನ್ನು ತಿಳಿಸಿದೆ. ಈ ತೀರ್ಥಗಳಲ್ಲಿ ಸ್ನಾನಮಾಡುವವರು ಕ್ರಮವಾಗಿ ಇವುಗಳನ್ನು ಸಂಪಾದಿಸುವರು. ಈ ಕ್ಷೇತ್ರದಲ್ಲಿ ಪರಶುರಾಮದೇವರು ನಿರ್ಮಿಸಿದ ತೀರ್ಥಗಳು-

೧. ಪರಶುತೀರ್ಥ

೨. ಧನುಸ್ತೀರ್ಥ

೩. ಗದಾತೀರ್ಥ

೪. ಬಾಣತೀರ್ಥ

ಇವುಗಳ ಮಹಿಮೆಯನ್ನು ಸ್ಕಂದ ಪುರಾಣದಲ್ಲಿ ವರ್ಣಿಸಲಾಗಿದೆ.

೧. ಪರಶುತೀರ್ಥ

'' ಪರಶ್ವಧೇನ ಭಗವಾನ್ ಶಿಲಾ ಮಧ್ಯ ದದಾರಾಹ ।
ಪೂರ್ವಸ್ಯಾಂದಿಶಿ ತತ್ರಾಸೀತ್ ತೀರ್ಥಂ ತನ್ನಾಮಕಂ ಶುಭಂ ॥''

ಪರಶುರಾಮದೇವರು ತಮ್ಮಕೊಡಲಿಯಿಂದ ಪೂರ್ವದಿಕ್ಕಿನಲ್ಲಿ ಬಂಡೆಯನ್ನು ಸೀಳಿದರು. ಆಗ ಅಲ್ಲಿ ಪರಶು ತೀರ್ಥವು ನಿರ್ಮಾಣವಾಯಿತು. ಇಲ್ಲಿ ಸ್ನಾನಮಾಡುವುದರಿಂದ ಋಣತ್ರಯದಿಂದ, ಮಹಾಪಾತಕಗಳಿಂದಲೂ ಮುಕ್ತನಾಗುವನು.

೨. ಧನುಸ್ತೀರ್ಥ

''ಯಾಮ್ಯಾಂ ದಿಶ ಚ ರಾಮೇಣ ಸ್ಥಾಪಿತಂ ಚಾಪಮದ್ಭುತಂ ।
ಧನುಸ್ತೀರ್ಥಂ ತತೋ ಜಜ್ಞೆ ಪ್ರಭಾವಾತ್ ಜಗದೀಶಿತುಃ ॥''

ಪರಶುರಾಮದೇವರು ದಕ್ಷಿಣ ದಿಕ್ಕಿನಲ್ಲಿ ಧನುಸ್ಸಿನಿಂದ ತೀರ್ಥವನ್ನು ನಿರ್ಮಿಸಿದರು. ಅದೇ ಧನುಸ್ತೀರ್ಥ. ಅಸ್ತ್ರಘಾತದಿಂದ ಮೃತರಾದವರಿಗೆ ಇಲ್ಲಿಯ ಸ್ನಾನದಿಂದ ಸದ್ಗತಿಯಾಗುವುದು.



೩. ಗದಾತೀರ್ಥ

''ವಾರುಣ್ಯಾಂ ದಿಶಿ ದೇವೇನ ಭಾರ್ಗವೇಣ ಮಹಾತ್ಮನಾ।
ಗದಾಘಾತೇನ ಜನಿತಂ ಗದಾತೀರ್ಥಂ ಪರಂ ಶುಭಂ ॥''

ಪರಶುರಾಮದೇವರು ಪಶ್ಚಿಮದಲ್ಲಿ ಶಿಲೆಯೊಂದನ್ನು ಗದೆಯಿಂದ ಹೊಡೆದು ಗದಾತೀರ್ಥವನ್ನು ನಿರ್ಮಿಸಿದರು. ಇಲ್ಲಿ ಸ್ನಾನಮಾಡುವುದರಿಂದ ೧೦೦ ಜನ್ಮಗಳ ಪಾಪಗಳು ನಾಶವಾಗುವವು.

೪. ಬಾಣತೀರ್ಥ

''ಸೋಮೇನ ಪಾಲಿತಾಯಾಂತು ದಿಶಿ ಪಶ್ಚಾತ್ ಮಹಾತ್ಮನಾ ।
ಅರ್ಧ ಚಂದ್ರಾಕೃತಿರ್ಬಾಣಃ ಕ್ಷಿಪ್ತೋ ರಾಮೇಣ ಭೂತಲೇ ॥''

ಪಾಜಕದ ಉತ್ತರದಲ್ಲಿ ಪರಶುರಾಮದೇವರು ಅರ್ಧಚಂದ್ರಾಕೃತಿಯ ತಮ್ಮ ಬಾಣದಿಂದ ಒಂದು ಶಿಲೆಯಲ್ಲಿ ತೀರ್ಥವನ್ನು ನಿರ್ಮಿಸಿದರು. ಇದೇ ಬಾಣತೀರ್ಥ. ಇದು ಎಲ್ಲ ತೀರ್ಥಗಳ ಸನ್ನಿಧಿಯುಳ್ಳದ್ದು. ಇಲ್ಲಿ ಸ್ನಾನ ಮಾಡುವುದರಿಂದ ಜ್ಞಾನ ಹಾಗು ಆನಂದಗಳು ಲಭಿಸುವವು.

## ಪಾಜಕ ಹಾಗೂ ಶ್ರೀಮಧ್ವರು

ಈ ಪವಿತ್ರ ಭೂಮಿಯಲ್ಲಿ ಸರ್ವಜ್ಞರಾದ ಮುಖ್ಯಪ್ರಾಣದೇವರು ಶ್ರೀಹರಿಯ ಅಪ್ಪಣೆಯಂತೆ, ದೇವತೆಗಳ ಪ್ರಾರ್ಥನೆಯಂತೆ, ಪಾಜಕದಲ್ಲಿ ಅವತರಿಸಿದರು. ಅತ್ಯಂತ ಸಾತ್ವಿಕರಾದ, ೧೨ ವರ್ಷ ಕಠಿಣವಾದ ಪಯೋವ್ರತವನ್ನು ಮಾಡಿದ, ಮಧ್ಯಗೇಹ ದಂಪತಿಗಳಿಗೆ ಮಗನಾಗಿ ಅವತರಿಸಿದರು. ಈ ಕಲಿಯುಗದಲ್ಲಿ ತತ್ವಜ್ಞಾನದ ರಕ್ಷಣೆಗಾಗಿಯೇ ಇವರು ಅವತರಿಸಿದ್ದರಿಂದ 'ವಾಸುದೇವ ' ಎಂದು ತಂದೆ ನಾಮಕರಣ ಮಾಡಿದರು. ಉಪನಯನವಾದ ಮೇಲೆ ತಾಯಿ ಈ ವಾಸುದೇವನಿಗೆ ಮನೆಯಿಂದ ದೂರವಿರುವ ಈ ನಾಲ್ಕು ತೀರ್ಥಗಳಿಗೆ ಒಬ್ಬನೇ ಹೋಗಬೇಡ ಎಂದು ಹೇಳಿದಳು.ಆಗ ವಾಸುದೇವನು ತಾಯಿಯ ಮಾತಿನಂತೆ ತನ್ನ ಮನೆಯ

ಈಶಾನ್ಯಭಾಗದಲ್ಲಿ ದಂಡದಿಂದ ಅಪ್ಪಳಿಸಿದನು. ಆಗ ನಿರ್ಮಾಣವಾದ ತೀರ್ಥವೇ ಆದ್ದರಿಂದ ಆ ನಾಲ್ಕು ತೀರ್ಥಗಳ ಸನ್ನಿಧಿಯೂ ಸ್ನಾನ ಮಾಡುತ್ತಿದ್ದನು. ಆದ್ದರಿಂದ ಆ ನಾಲ್ಕು ತೀರ್ಥಗಳ ಸನ್ನಿಧಿಯೂ ಇದರಲ್ಲಿದೆ.

ಪಾಜಕದಲ್ಲಿ ವಾಯುದೇವರು ವಾಸುದೇವರಾಗಿ ಅವತರಿಸಿದ ಮನೆ ಇಂದಿಗೂ ಇದೆ. ಮಧ್ಯಗೇಹ ಭಟ್ಟರ ಕುಲದೇವತೆ '' ಶ್ರೀ ಅನಂತಪದ್ಮನಾಭ ದೇವರು '' ಈ ಮಂದಿರದ ಬಲಬದಿಯಲ್ಲಿ ತುಳಸಿಯ ವೃಂದಾವನವಿದೆ. ಅಲ್ಲಿ ಒಂದು ಹಾಸುಗಲ್ಲು. ಆ ಕಲ್ಲಿನ ಮೇಲೆ ಮಧ್ಯಗೇಹ ಭಟ್ಟರು ಮಗನಾದ ಬಾಲಕ ವಾಸುದೇವರಿಗೆ ಅಕ್ಷರಾಭ್ಯಾಸವನ್ನು ಮಾಡಿಸಿದರು. ಒಮ್ಮೆ ಹೇಳಿದ್ದನ್ನು ಹಾಗೆ ಗ್ರಹಿಸುವ ಶಕ್ತಿ ವಾಸುದೇವರದ್ದು. ''ಲಿಪಿಕುಲಂ ನನು ತಾತ ಗತೇ ದಿನೆ ಲಿಖಿತಮೇವ ಪುನಃ ಲಿಖಿತಂ ಕುತಃ'' ಎಂದು ಸುಮಧ್ವವಿಜಯದಲ್ಲಿ ವರ್ಣಿಸಿದ್ದಾರೆ. ಈ ಪ್ರತಿಭೆಯನ್ನು ನೋಡಿ ತಂದೆ ಬೆರಗಾದರು. ಇಂದಿಗೂ ಜನರು ತಮ್ಮ ಮಕ್ಕಳಿಗೆ ಆ ಹಾಸುಕಲ್ಲಿನ ಮೇಲೆ ಅಕ್ಷರಾಭ್ಯಾಸವನ್ನು ಮಾಡಿಸುತ್ತಾರೆ.

ಒಮ್ಮೆ ವಾಸುದೇವಭಟ್ಟರು ಆಟವಾಡಿ ಊಟಕ್ಕೆ ಮನೆಗೆ ಬಂದಾಗ, ಎಲ್ಲರೂ ಚಿಂತಾಕ್ರಾಂತರಾಗಿ ಕುಳಿತುಕೊಂಡಿರುತ್ತಾರೆ. ಮಧ್ಯಗೇಹ ಭಟ್ಟರು ಒಬ್ಬನಲ್ಲಿ ಸಾಲವನ್ನು ತೆಗೆದುಕೊಂಡಿರುತ್ತಾರೆ. ಮರಳಿ ಅವನಿಗೆ ಕೊಟ್ಟಿರುವುದಿಲ್ಲ. ಪೂರ್ಣವಾಗಿ ತೆಗೆದುಕೊಳ್ಳದೆ ಮನೆಗೆ ಹೋಗುವುದಿಲ್ಲವೆಂದು ಸಾಲಕೊಟ್ಟ ಧನಿಕ ಕುಳಿತುಕೊಂಡಿದ್ದಾನೆ. ಇದನ್ನು ಗಮನಿಸಿ ವಾಸುದೇವಭಟ್ಟರು, ಆ ಧನಿಕನನ್ನು ಹುಣಿಸೆ ಮರದ ಕೆಳಗೆ ಕರೆದುಕೊಂಡು ಹೋಗಿ ತನ್ನ ಮಂಗಳಕರವಾದ ಕೈಗಳಿಂದ ಹುಣಸೆ ಬೀಜಗಳನ್ನು ತೆಗೆದುಕೊಂಡು, ಆ ಧನಿಕನ ಕೈಯಲ್ಲಿ ಹಾಕುವರು. ಅವು ಆ ಧನಿಕನ ಕೈಯಲ್ಲಿ ಹಣವಾದವು. ಆತನು ತೆಗೆದುಕೊಂಡು ಹೊರಟನು. ಮುಂದೊಮ್ಮೆ ಮಧ್ಯಗೇಹಭಟ್ಟರು ಸಾಲವನ್ನು ವಾಪಾಸು ನೀಡಲು ಹೋದಾಗ 'ನಿನ್ನ ಮಗ ನನಗೆ ಹೆಚ್ಚಿಗೆ ಹಣವನ್ನು ಕೊಟ್ಟಿರುವನು' ಎಂದು



ಹೇಳಿ ಹೋದನು. ತಂದೆಗೆ ಈ ಮಗನ ಲೀಲೆಗಳು ಆಶ್ಚರ್ಯಕರಗಳಾದವು. ''ಬೀಜಫಲೇನ ಪುರುಷಾರ್ಥಮಹೋವಿಶಿಷ್ಟಂ'' ಎಂದು ಸುಮಧ್ವವಿಜಯದಲ್ಲಿ ಈ ಪ್ರಸಂಗವನ್ನು ವರ್ಣಿಸಿದ್ದಾರೆ. ಈ ಮರವು ಇಂದಿಗೂ ಅವರ ಮನಯಲ್ಲಿ ಇದೆ.

ವಾಸುದೇವಭಟ್ಟರಿಗೆ ಉಪನಯನವಾದ ಮೇಲೆ, ಅವರನ್ನು ಕಚ್ಚಿ ಕೊಲ್ಲಬೇಕೆಂದು ಮಣಿಮಂತ ದೈತ್ಯನು ಸರ್ಪರೂಪದಲ್ಲಿ ಬರುವನು. ''ಸ ಸರ್ಪಮಯೋಸುರಃ'' ಎಂದು ಸುಮಧ್ವವಿಜಯದಲ್ಲಿ ವರ್ಣಿಸಿದ್ದಾರೆ. ಆಗ ವಾಸುದೇವಭಟ್ಟರು ತನ್ನ ಕಾಲಿನ ಬೆರಳಿನ ಸ್ಪರ್ಶಮಾತ್ರದಿಂದಲೇ ಅವನನ್ನು ಸಂಹರಿಸಿದನು. ಇಂದಿಗೂ ಆ ಪ್ರದೇಶವನ್ನು ನೋಡಬಹುದು.

ಒಮ್ಮೆ ದುರ್ಗಾದೇವಿಯ ಬಳಿಯಲ್ಲಿದ್ದ ವಾಸುದೇವಭಟ್ಟರನ್ನು ತಾಯಿ ಕರೆದಾಗ ಆ ಬೆಟ್ಟದಿಂದ ಒಂದೇ ಹೆಜ್ಜೆಗೆ ಬರುವರು. ಅಲ್ಲಿ ಇಟ್ಟ ಹೆಜ್ಜೆ ಸುಂದರವಾಗಿ ಮೂಡಿತು. ಇಂದಿಗೂ ನಾವು ಅದನ್ನು ಅವರ ಮನೆಯಲ್ಲಿ ನೋಡಬಹುದು. ಆಚಾರ್ಯರ ಕೋಮಲವಾದ ಪಾದಗಳು ತನ್ನ ಮೇಲೆ ಬಿದ್ದಾಗ ಆನಂದದಿಂದ ಭೂತಾಯಿ ಉಬ್ಬಿದಳು ಎಂದು ಉಬ್ಬಿರುವ ಪಾದದ ಗುರುತುಗಳನ್ನು ಕುರಿತು ಸಾತ್ವಿಕರು ಹೇಳುವರು.

ಇಂತಹ ಪವಿತ್ರ ಪಾಜಕದಲ್ಲಿರುವ ಶ್ರೀಮದಾಚಾರ್ಯರ ಪಾದ ಗುರುತುಗಳ ಹತ್ತಿರ ಶ್ರೀಮದ್ವಾದಿರಾಜರು ಆಚಾರ್ಯಮಧ್ವರ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿರುವರು. ಅಂತಹ ಆಚಾರ್ಯರ ಪಾದಧೂಳಿನಿಂದ ಕೂಡಿರುವ ಪಾಜಕಕ್ಷೇತ್ರವು ಸರ್ವಸಜ್ಜನರಿಗೆ ರಕ್ಷಣೆ ನೀಡಲಿ.

॥ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು ॥

ಶ್ರೀಭೂತರಾಜನಮಸ್ತುಭ್ಯಂ ವಾದಿರಾಜಗುರೋಃ ಪ್ರಿಯ ।

ವಿದ್ರಾವಯಸಮಾಬಾಧಾಃ ಸದಾ ತ್ವಂ ರಕ್ಷಣಂ ಕುರು ॥